## ಪ್ರಾರ್ಥನೆ

# ದೇವೀ ಭುಜಂಗ ಪ್ರಯಾತ ಸ್ತೋತ್ರದಿಂದ



**ವಿರಿಂಚಾದಿರೂಪೈಃ ಪ್ರಪಂಚೇ ವಿಹೃತ್ಯ**
**ಸ್ವತಂತ್ರಾ ಯದಾ ಸ್ವಾತ್ಮವಿಶ್ರಾಂತಿರೇಷಾ ।**
**ತದಾ ಮಾನಮಾತೃಪ್ರಮೇಯಾತಿರಿಕ್ತಂ**
**ಪರಾನಂದಮೀಡೇ ಭವಾನಿ ತ್ವದೀಯಮ್ ॥ ೩ ॥**

ಬ್ರಹ್ಮಾದಿರೂಪಗಳಿಂದ ಪ್ರಪಂಚದಲ್ಲಿ ವಿಹರಿಸಿ, ಬಳಿಕ ಸ್ವತಂತ್ರಳಾದಾಗ ಎಲ್ಲವೂ ನಿನ್ನಲ್ಲೇ ವಿಶ್ರಾಂತವಾಗುವವು. ಆಗ ಮಾನ-ಮಾತೃ-ಮೇಯಗಳಿಂದ ಭಿನ್ನವಾದ ನಿನ್ನ ಸ್ವರೂಪವನ್ನು ಯಾರೂ ಅರಿಯಲಾರರು. ಅಂತಹ ನಿನ್ನ ಪರಾನಂದ ಸ್ವರೂಪವನ್ನು ನಾನು ಭಜಿಸುತ್ತೇನೆ.

**ಶರೀರೇ ಧನೇಽಪತ್ಯವರ್ಗೇ ಕಲತ್ರೇ**
**ವಿರಕ್ತಸ್ಯ ಸದ್ದೇಶಿಕಾದಿಷ್ಟಬುದ್ಧೇಃ ।**
**ಯದಾಕಸ್ಮಿಕಂ ಜ್ಯೋತಿರಾನಂದರೂಪಂ**
**ಸಮಾಧೌ ಭವೇತ್ತತ್ತ್ವಮಸ್ಯಂಬ ಸತ್ಯಮ್ ॥ ೭ ॥**

ಹೇ ತಾಯಿ, ಶ್ರೇಷ್ಠ ಗುರುಗಳಿಂದ ಆದೇಶ ಪಡೆದು ತನ್ನ ಶರೀರ, ಹಣ, ಮಕ್ಕಳು, ಪತ್ನಿ ಇತ್ಯಾದಿಗಳಲ್ಲಿ ವಿರಕ್ತಿ ಹೊಂದಿದವನಿಗೆ ಸಮಾಧಿಯಲ್ಲಿ ಉಂಟಾಗುವ ಆನಂದರೂಪದ ಜ್ಯೋತಿಯೇ ನೀನಾಗಿರುವೆ.

**ಕದಾ ವಾ ಭವತ್ಪಾದ ಪೋತೇನ ತೂರ್ಣಂ**
**ಭವಾಂಭೋಧಿಮುತ್ತೀರ್ಯ ಪೂರ್ಣಾಂತರಂಗಃ ।**
**ನಿಮಜ್ಜಂತಮೇನಂ ದುರಾಶಾವಿಷಾಬ್ಧೌ**
**ಸಮಾಲೋಕ್ಯ ಲೋಕಂ ಕಥಂ ಪರ್ಯುದಾಸ್ಸೇ ॥ ೧೯ ॥**

ನಿನ್ನ ಪಾದವೆಂಬ ನೌಕೆಯ ಸಹಾಯದಿಂದ ಬೇಗನೆ ಈ ಭವಸಾಗರವನ್ನು ದಾಟಿ, ನಿನ್ನ ಭಾವದಿಂದ ನನ್ನ ಅಂತರಂಗ ತುಂಬಿಕೊಳ್ಳುವುದು ಯಾವಾಗ? ದುರಾಸೆಯೆಂಬ ವಿಷದ ಸಾಗರದಲ್ಲಿ ಮುಳುಗುತ್ತಿರುವ ನನ್ನಂಥವರನ್ನು ನೋಡಿಯೂ ನೀನು ಹೇಗೆ ಉದಾಸೀನಳಾಗಿರುವೆ?

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

## ಸಂತರ ಸೂಕ್ತಿಗಳು



ನಮಗಿರುವುದು ಒಂದೇ ಜೀವನ. ಅದನ್ನು ನಮ್ಮ ನಂಬಿಕೆಗೆ ತಕ್ಕಂತೆ ಬದುಕಬೇಕು. ಆದರೆ ನಾವೇನು ಆಗಿದ್ದೇವೋ ಅದನ್ನು ಬಲಿಗೊಟ್ಟು, ನಮ್ಮ ನಂಬಿಕೆಗಳನ್ನು ಬಿಟ್ಟು ಬದುಕುವುದು ಸಾವಿಗಿಂತಲೂ ಭಯಾನಕವಾದದ್ದು.

— ಜಾನ್ ಆಫ್ ಆರ್ಕ್
(೧೫ನೇ ಶತಮಾನದ ಫ್ರಾನ್ಸ್ ಸಂತ ಮಹಿಳೆ)



ಇಡೀ ಜಗತ್ತನ್ನೇ ಸ್ನೇಹದಿಂದ ಆಲಿಂಗಿಸಿಕೊಳ್ಳುವುದು ನಿಜವಾದ ತಿಳಿವಳಿಕೆ. ಅದು ಹೂವಿನಂತೆ ಅರಳಿ ಬಾಡುವುದಲ್ಲ; ಅದು ಎಂದಿಗೂ ಬದಲಾಗದೆ ಇರುವುದು.

— ತಿರುವಳ್ಳುವರ್



ಬರಿ ಮಾತುಗಳಿಂದ ಮಾತ್ರ ಸ್ನೇಹವನ್ನು ತೋರಿಸಿ ತೃಪ್ತನಾಗಬೇಡ, ನಿನ್ನ ಹಾದಿಯಲ್ಲಿ ಎದುರಾಗುವ ಎಲ್ಲರಿಗೂ ಅನುಕಂಪ ಬೀರುತ್ತ ನಿನ್ನ ಹೃದಯ ಉರಿದುಹೋಗಲಿ.

— ಬಹಾ ಉಲ್ಲಾ
(ಪರ್ಷಿಯಾದ ಬಹಾಯಿ ಸಂತ)



ಎಲ್ಲ ಉನ್ನತ ಭಾವಗಳನ್ನೂ ಮುಕ್ತ ಮನಸ್ಸಿನಿಂದ ಅರಸು ಹಾಗೂ ಆಲಿಸು. ಅತ್ಯಂತ ಬೋಧಪ್ರದವಾದ ಚಿಂತನೆಗಳನ್ನು ಮನನ ಮಾಡು. ಅನಂತರ ನಿನ್ನ ಹಾದಿಯನ್ನು ನೀನು ಅರಸಿಕೋ.

— ಝರತುಷ್ಟ್ರ